210 (124) ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡ ಬಳ್ಳಾಪುರ)

ಮಾನ್ಯ ಸಹಕಾರರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1) ರೈತರ ಸಾಲ ಮನ್ನಾ ವಿಚಾರದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾಡಿರುವ ಸಾಲವನ್ನು ಮನ್ನಾ ಮಾಡಲು ಸರ್ಕಾರ ಕ್ರಮ ಕೈಗೋಳ್ಳದಿರಲು ಕಾರಣವೇನು?

ಶ್ರೀ ಜಿ ಟಿ ದೇವೇಗೌಡ

1) ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರದಿರುವುದರಿಂದ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ರೈತರು ಪಡೆದಿರುವ ಸಾಲ ಮನ್ನಾ ಪ್ರಸ್ತಾವವು ರಾಜ್ಯ ಸರ್ಕಾರದ ಮುಂದೆ ಇರುವುದಿಲ್ಲ

210 (124) ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡ ಬಳ್ಳಾಪುರ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿ ರಾಸಾಯನಿಕ ಗೊಬ್ಬರಗಳಾದ ಡಿ,ಎ,ಪಿ, 20 20 16 ಮತ್ತು 17 17 17 ಇನ್ನೂ ಮುಂತಾದ ಸಂಕೀರ್ಣ ಗೊಬ್ಬರಗಳು ಮಾರುಕಟ್ಟೆಯಲ್ಲಿ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ತುರ್ತಾಗಿ ರಾಸಾಯನಿಕ ಗೊಬ್ಬರಗಳು ತಾಲ್ಲೂಕಿನಲ್ಲಿ ರೈತರಿಗೆ ಸಿಗುವಂತೆ ಮಾಡಲು ಸರ್ಕಾರ ಯಾವ ಕ್ರಮ ತೆಗೆದು ಕೊಂಡಿದೆ?

ಶ್ರೀ ಬಂಡೆಪ್ಪ ಕಾಂಶೆಂಪೂರ

ಅ) ಹೌದು

ಆ) ಬೇಡಿಕೆಗನುಗುಣವಾಗಿ ಪೂರೈಸಲು ಸಂಬಂಧಪಟ್ಟ ರಸಗೊಬ್ಬರ ತಯಾರಿಕಾ ಸಂಸ್ಥೆಗಳಿಗೆ ಸೂಚಿಸಲಾಗಿದೆ

ಆರಾಧನಾ ಸಮಿತಿ ರಚನೆ

212 (571) ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡ ಬಳ್ಳಾಪುರ)

ಮಾನ್ಯ ಮೀನುಗಾರಿಕ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸರ್ಕಾರ ರಚನೆಗೊಂಡು 16 ತಿಂಗಳಿನಿಂದ ಈವರೆಗೆ ಆರಾದನಾ ಸಮಿತಿಗಳನ್ನು ರಚಿಸದೆ ಆರಾಧನಾ ಕಾರ್ಯಕುಂರಿತ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಾದರೆ ತೆಗೆದುಕೊಂಡಿರುವ ಕ್ರಮವೇನು ಹಾಗೂ ಸಮಿತಿ ರಚನೆಗೆ ಇನ್ನೂ ಎಷ್ಟು ಕಾಲಾವಕಾಶಬೇಕು,

ಇ) ಈ ಯೋಜನೆಗಾಗಿ ಮೀಸಲಿಟ್ಟ ಹಣವೆಷ್ಟು, ದೊಡ್ಡಬಳ್ಳಾಪುರ ತಾಲ್ಲೂಕಿಗೆ ಎಷ್ಟು ನಿಗಧಿಪಡಿಸಲಾಗಿದೆ ಹಾಗೂ ಎಷ್ಟು ಬಿಡುಗಡೆ ಮಾಡಲಾಗಿದೆ?

ಶ್ರೀ ಬಿ ನಾಗರಾಜ್ ಶೆಟ್ಟಿ

ಅ) ಇಲ್ಲ ಈಗಾಗಲೇ119 ವಿದಾನ ಸಭಾ ಕ್ಷೇತ್ರಗಳಿಗೆ ಆರಾಧನಾ ಸಮಿತಿಗಳನ್ನು ರಚಿಸಲಾಗಿದೆ